ವಿದ್ಯಾಭ್ಯಾಸದ ಇಲಾಖೆ.

1909ನೆಯ ಇಸವಿ ಅಕ್ಟೋಬರ್ 18ನೆಯ ತಾರೀಖಿನ ಡಿ. ನಂಬರು 12.

ವ್ಯವಸಾಯಾನುಭವದ ಪರೀಕ್ಷೆ.

1909ನೆಯ ಇಸವಿ ಆಗಸ್ಟ್ 23ನೆಯ ತಾರೀಖು ಡಿ. ನಂಬರು 21ನೆಯ ಪ್ರಕಟನ ಪತ್ರಿಕೆಯನ್ನನುಸರಿಸಿ, ವ್ಯವಸಾಯಾನುಭವದ ಬರಹದ ಪರೀಕ್ಷೆಯು ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ಡಿಸೆಂಬರ್ 4ನೆ ತಾರೀಖಿನಲ್ಲಿಯೂ, ವ್ಯಾವಹಾರಿಕ ಪರೀಕ್ಷೆಯು ನಾರ್ಮಲ್ ಸ್ಕೂಲಿಗೆ ಸೇರಿದ ಸರ್ಕಾರಿ ಫಾರಂನಲ್ಲಿ ಡಿಸೆಂಬರ್ 11ನೆಯ ತಾರೀಖಿನಲ್ಲಿಯೂ ನಡೆಯಿಸಲ್ಪಡುತ್ತದೆ.

1909ನೆಯ ಇಸವಿ ಅಕ್ಟೋಬರ್ 18ನೆಯ ತಾರೀಖಿನ ಡಿ. ನಂಬರು 13.

ಹೊಲಿಗೆಯಲ್ಲಿ ಉಪಾಧ್ಯಾಯಿ ಪ್ರಾವೀಣ್ಯ ನಿರ್ಣಾಯಕ ಪರೀಕ್ಷೆ.

1909ನೆಯ ಇಸವಿ ಆಗಸ್ಟ್ 14ನೆಯ ತಾರೀಖು ಡಿ. ನಂಬರು 5ನೆಯ ಪ್ರಕಟನ ಪತ್ರಿಕೆಯನ್ನನುಸರಿಸಿ, ಹೊಲಿಗೆಯಲ್ಲಿ ಉಪಾಧ್ಯಾಯಿಪ್ರಾವೀಣ್ಯ ನಿರ್ಣಾಯಕ ಪರೀಕ್ಷೆಯು ಬೆಂಗಳೂರು ಮತ್ತು ಮೈಸೂರು ಪಟ್ಟಣಗಳಲ್ಲಿ ನವೆಂಬರ್ 29ನೆಯ ತಾರೀಖು ಸೋಮವಾರದ ಲಾಗಾಯಿತು ನಡೆಯಿಸಲ್ಪಡುತ್ತದೆ.

ಹೆಚ್. ಜೆ. ಭಾಭಾ,
ಇನ್ಸ್‌ಪೆಕ್ಟರ್ ಜನರಲ್ ಆಫ್ ಎಜ್ಯುಕೇಷನ್.

ಫಾರೆಸ್ಟ್ ಇಲಾಖೆ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 21ನೆ ಆಗಸ್ಟ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—

ಮೈಸೂರು ಸರಕಾರದ ಶ್ರೀಗಂಧದ ಸಾಲೇಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಅದರ ದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು.

ನಂ.	ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು		ಜಪ್ತಿಯಾಗಿರುವ ಸಂದಲ್ ಮರಗಳ ತೂಕ	ಷರಾ.
1	ಶಿವಮೊಗ್ಗ ...	ತೀರ್ಥಹಳ್ಳಿ ...	1909ನೆ ಇಸವಿ ನವೆಂಬರ್	ತಾರೀಖು 18	100	
2	ಡಿಟೋ ...	ಸಾಗರ ...	ಡಿಟೋ	22	100	
3	ಡಿಟೋ ...	ಶಿವಮೊಗ್ಗ ...	ಡಿಟೋ	25	500	
4	ಕಡೂರು ...	ತರೀಕೆರೆ ...	ಡಿಟೋ	29	(a)200	(a) ಚಿತ್ರದುರ್ಗದ 10 ಟ್ರಗಳು ಕೀರಿರುತ್ತೆ.
5	ಡಿಟೋ ...	ಚಿಕ್ಕಮಗಳೂರು ...	1909ನೆ ಡಿಸೆಂಬರ್	ತಾರೀಖು 2	400	
6	ಹಾಸನ ...	ಹಾಸನ ...	ಡಿಟೋ	6	200	
7	ಬೆಂಗಳೂರು ...	ಬೆಂಗಳೂರು ...	ಡಿಟೋ	9	(b)100	(b) ತುಮಕೂರು 30 ಟ್ರಗಳು ಕೋಲಾರದ 5 ಟ್ರಗಳು ಕೀರಿರುತ್ತೆ.
8	ಮೈಸೂರು ...	ಶ್ರೀರಂಗಪಟ್ಟಣ ...	ಡಿಟೋ	13	250	
9	ಡಿಟೋ ...	ಹುಣಸೂರು ...	ಡಿಟೋ	16	450	
			ಜುಮ್ಲಾ	...	2,400	

ಎಂ. ಮುತ್ತಣ್ಣ,
ಇನ್ಸರ್ವೇಟರ್ ಆಫ್ ಫಾರೆಸ್ಟ್ಸ್, ಇನ್ ಮೈಸೂರು.

ಇಸ್ತಿಹಾರ್ನಾಮೆ.

ಸ್ಯ 1909ನೆ ಇಸವಿ ಸೆಪ್ಟೆಂಬರ್ 23ರಲ್ಲಿ ಫಾಯಿಷ್ ಆದ ನಂಬರು R. 2550-1—Ft. 41-09-2ನೆ ನೋಟಿಫಿಕೇಷನ ಅನುಸರಿಸಿ ಈ ಕೆಳಗೆ ನಮೂದಿಸಿರುವ ಸ್ಟೇಟ್ ಫಾರೆಸ್ಟ್ಗಳಲ್ಲಿ ಪಬ್ಲಿಕ್‌ಗೆ ಉಪಯೋಗಕ್ಕೊಸ್ತರ ದಾರಿಗಳನ್ನು ಬಿಟ್ಟು ಕೊಟ್ಟಿರುತ್ತೆ.

ನರಸಿಂಹದೇವರ ಬೆಟ್ಟದ IIನೆ ಬ್ಲಾಕ್.

1. ಚಿಕ್ಕಬಳ್ಳಾಪುರದಿಂದ ಬಿಸಗ್ನಿ ಗುಡಿಗೆ ಸದಾಕಾಲದಲ್ಲಿಯೂ ಜನಗಳು ಮತ್ತು ದನಗಳು ಧಾರಾಳವಾಗಿ ಹೋಗಿ ಬರತಕ್ಕ ಬಗ್ಗೆ 3 ಗಜ ಅಗಲ ಮತ್ತು 3 ಫರ್ಲಾಂಗು ಉದ್ದವುಳ್ಳ ಕಾಲುದಾರಿ. ಈ ದಾರಿಯು ಸ್ಟೇಟ್‌ಫಾರೆಸ್ಟಿನ ಡಿವಾರ್ಕೇಷನ್ ಲೈನಿನ 2ನೆ ಮೈಲಿಯ 5ನೆ ಫರ್ಲಾಂಗು ಕಲ್ಲಿನ ದಕ್ಷಿಣಕ್ಕೆ 4 ಸರಪಣಿ ದೂರದಲ್ಲಿ ಸ್ಟೇಟ್ ಫಾರೆಸ್ಟಿನಲ್ಲಿ ಪ್ರಾರಂಭವಾಗಿ ಪಶ್ಚಿಮಕ್ಕು ಮತ್ತು ವಾಯವ್ಯಕ್ಕು ಹರದು ಫಾರೆಸ್ಟಿನಲ್ಲಿ ಕೀರಿಹೋಗಿರುವ ದೇವಸ್ಥಾನವನ್ನು ಸೇರುತ್ತೆ.